ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು-560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 16.05.2023

# ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ

## ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)
## (ದಿನಾಂಕ 17-05-2023 ರಿಂದ 21-05-2023 ವರೆಗೆ)

| ನಿಯತಾಂಕಗಳು | 17.05.2023 | 18.05.2023 | 19.05.2023 | 20.05.2023 | 21.05.2023 |
|---|---|---|---|---|---|
| ಮಳೆ (ಮಿ ಮಿ) | 0 | 0 | 0 | 0 | 3 |
| ಗರಿಷ್ಠ ಉಷ್ಣಾಂಶ (ಡಿ.ಸೆ. ) | 37 | 37 | 38 | 38 | 37 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 23 | 23 | 22 | 23 | 23 |
| ಮೋಡ (ಪ್ರಮಾಣ) | 3 | 3 | 4 | 4 | 4 |
| ಆರ್ದ್ರತೆ 7.20 ಬೆ (ಶೇ) | 63 | 58 | 57 | 62 | 57 |
| ಆರ್ದ್ರತೆ 2.20 ಮ (ಶೇ) | 23 | 25 | 23 | 27 | 27 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 14 | 13 | 11 | 11 | 9 |
| ಗಾಳಿಯ ದಿಕ್ಕು (ಡಿಗ್ರಿ) | 292 | 207 | 214 | 210 | 252 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ 37.0–38.0$^{o}$ C ಮತ್ತು ಕನಿಷ್ಠ 22.0–23.0$^{o}$ C ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **57-63** % ಇದ್ದು ಮಧ್ಯಾಹ್ನ **23-27** % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 9–14 ಕಿ.ಮೀ. ವೇಗದಲ್ಲಿ ಬೀಸುವ ಸ೦ಭವವಿದೆ.

**ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ**

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| | | • ಮುಂದಿನ ನಾಲ್ಕೈದು ದಿನಗಳಲ್ಲಿ ಮೊಡಕವಿದ ವಾತಾವರಣವಿದ್ದು ಗುಡುಗು ಸಹಿತ ಹಗುರ ಮಳೆ ನಿರೀಕ್ಷೆ ಇದೆ.<br>• ಉತ್ತಮ ಮಳೆಯ ಮುನ್ಸೂಚನೆ ಇರುವುದರಿಂದ ಖುಷ್ಕಿ ಜಮೀನಿನಲ್ಲಿ ಬದು ಮತ್ತು ಬಸಿಗಾಲುವೆಗಳನ್ನು ಸ್ವಚ್ಛ ಮಾಡುವುದು ಹಾಗು ಕೃಷಿ ಹೊಂಡಗಳನ್ನು ದುರಸ್ತಿಗೊಳಿಸಿ ನೀರು ನಿಧಾನವಾಗಿ ಹರಿಯುವಂತೆ ಮಾಡುವುದು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಮಾಡುವುದು.<br>• ಬೇಸಿಗೆ ಉಳುಮೆ ಮಾಡುವುದರಿಂದ ಹುಳುಗಳ ವಿವಿಧ ಹಂತಗಳನ್ನು ನಾಶಪಡಿಸಬಹುದು ಮತ್ತು ಕಳೆಗಳನ್ನು ನಿಯಂತ್ರಿಸಬಹುದು.<br>• ಕೆರೆಗಳಲ್ಲಿ ಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು<br>• ಪೂರ್ವ ಮುಂಗಾರಿಗೆ ಭೂಮಿ ಮತ್ತು ಬಿತ್ತನೆಗೆ ಬೇಕಾಗುವ ಪರಿಕರಗಳ ಪೂರಕಗಳನ್ನು ಸಿದ್ಧತೆ ಮಾಡಿಕೊಳ್ಳಿ. |
| ಮಾವು | ಮಾಗುವ ಮತ್ತು ಕಟಾವು ಹಂತ | 1. ಮಾವಿನ ಬೆಳೆಗಳಲ್ಲಿ ಹಣ್ಣು ನೊಣದ ನಿಯಂತ್ರಣಕ್ಕಾಗಿ ಕಾರ್ಬರಿಲ್ 4 ಗ್ರಾ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಣೆ ಮಾಡಿ.<br>2. ಹಣ್ಣನ್ನು ಕಟಾವು ಮಾಡುವ ಸಮ೦ಯದಲ್ಲಿ ನೆಲಕ್ಕೆ ತಾಗದ ರೀತಿ ಎಚ್ಚರ ವಹಿಸಿ. ಇದರಿಂದ ಕಟಾವಿನ ನಂತರ ಶಿಲೀಂಧ್ರದಿಂದ ಬರುವ ಹಲವಾರು ರೋಗಗಳನ್ನು ತಡೆ೦ಯಬಹುದು.<br>3. ಮಾವು ಬೆಳೆಗಾರರು ಚೆನ್ನಾಗಿ ಬಲಿತು ಕಟಾವಿಗೆ ಬಂದಿರುವ ಮಾವಿನ ಕಾಯಿಯನ್ನು ಕಟಾವು ಮಾಡುವಾಗ ಒಂದು ಇಂಚು ತೊಟ್ಟನ್ನು ಬಿಟ್ಟು ಕಟಾವು ಮಾಡಬೇಕು. ನಂತರ ಮಾವಿನ ಕಾಯಿಗಳನ್ನು ಪ್ಲಾಸ್ಟಿಕ್ ಕ್ರೇಟಿನಲ್ಲಿ ಪೇಪರ್ ಹಾಕಿ ಜೋಡಿಸಬೇಕು. ಕಟಾವು ಮಾಡಿದ 24 ಗಂಟೆಯ ನಂತರ ಕ್ರೇಟ್‌ಗಳನ್ನು ಒಂದರ ಮೇಲೊಂದರಂತೆ 5 ರಿಂದ 6 ಕ್ರೇಟ್‌ಗಳನ್ನು ಅರ್ಧ ಅಡಿ ಅಂತರದಲ್ಲಿ ಜೋಡಿಸಿ ಮಧ್ಯದಲ್ಲಿ ಸಣ್ಣ ಪ್ಲಾಸ್ಟಿಕ್ ಲೋಟಗಳಲ್ಲಿ 300 ಮಿ.ಲೀ. ನೀರಿನಲ್ಲಿ |

| | | |
|---|---|---|
| | | 10 ಮಿ.ಲೀ. ಎಥಿಲಿನ್ ದ್ರಾವಣ ಹಾಕಿ ನಂತರ 10 ಗ್ರಾಂ ನಷ್ಟು ಕಾಸ್ಟಿಕ್ ಸೋಡ (Sodium hydroxide) ಹಾಕಿಡಬೇಕು. ನಂತರ ಟಾರ್ಪಾಲ್‌ನಿಂದ ಗಾಳಿಯಾಡದಂತೆ ಭದ್ರವಾಗಿ ಮುಚ್ಚಬೇಕು. ಹೀಗೆ ಮಾಡಿದ 48 ಅಥವಾ 60 ಗಂಟೆಯ ನಂತರ ಟಾರ್ಪಾಲ್ ತೆಗೆದು ಗಾಳಿಯಾಡಲು ಬಿಡಬೇಕು. 1 ಟನ್ ಹಣ್ಣಿಗೆ 8 ರಿಂದ 10 ಗ್ಲಾಸ್‌ಗಳಲ್ಲಿ ಎಥಲಿನ್ ಇಡಬೇಕು. ಈ ರೀತಿಯಾಗಿ ನೈಸರ್ಗಿಕವಾಗಿ ಮಾಗಿಸುವುದರಿಂದ ಗುಣಮಟ್ಟದ ಹಣ್ಣನ್ನು ಪಡೆಯುವುದರ ಜೊತೆಗೆ ಉತ್ತಮ ಮಾರುಕಟ್ಟೆ ದರವನ್ನು ಪಡೆಯಬಹುದು. |
| **ಪಶುಸಂಗೋಪನೆ** | | 1. ಹೆಚ್ಚು ಕರಾವು ಕೊಡುವ ರಾಸುಗಳ ಆಹಾರದಲ್ಲಿ ಕನಿಷ್ಠ ಶೇ. 17 ರಷ್ಟು ನಾರಿನ ಅಂಶವಿರಬೇಕು ( ಎನ್.ಡಿ.ಎಫ್. ಶೇ.22 ರಷ್ಟಿರಬೇಕು.)<br>2. ಹೆಚ್ಚು ಪಶು ಆಹಾರ ತಿನ್ನಿಸುವ ಸಮಯದಲ್ಲಿ ಅದನ್ನು 3–4 ಸಮಭಾಗ ಮಾಡಿ ನಿತ್ಯ ನಾಲ್ಕು ಬಾರಿ ತಿನ್ನಿಸುವುದು ಉತ್ತಮ.<br>3. ದ್ವಿದಳ ಧಾನ್ಯಗಳ ಬೆಳೆಗಳಲ್ಲಿ ಕರಗುವ ಶರ್ಕರ ಪದಾರ್ಥಗಳು ಕಡಿಮೆ ಇದ್ದು ತೇವಾಂಶ ಹೆಚ್ಚಿರುವುದರಿಂದ ಬೆಳೆಗಳನ್ನು ಸ್ವಲ್ಪ ಬಾಡಿಸಿ ಉಪಯೋಗಿಸಬೇಕು. ದ್ವಿದಳ ಧಾನ್ಯದ ಸೊಪ್ಪುಗಳನ್ನು ರಸ ಮೇವಿನಲ್ಲಿ ಶೇ.10 ರಿಂದ 15 ರಷ್ಟು ಮಾತ್ರ ಉಪಯೋಗಿಸಬೇಕು.<br>4. ಬೆಳೆಯಲ್ಲಿ ಶೇ. 65–70 ರಷ್ಟು ತೇವಾಂಶ ಇರಬೇಕು. ತೇವಾಂಶ ಇದಕ್ಕಿಂತಲೂ ಕಡಿಮೆಯಾದರೆ ಹುದುಗುವಿಕೆ ವಿಫಲಗೊಂಡು ಕಳಪೆ ಗುಣಮಟ್ಟದ ಕಂದು ಬಣ್ಣದ ರಸಮೇವು ತಯಾರಾಗುತ್ತದೆ. ಇದೇ ರೀತಿ ಮೇವಿನಲ್ಲಿ ತೇವಾಂಶ ಶೇ.70 ಕ್ಕಿಂತಲೂ ಹೆಚ್ಚಿದ್ದರೆ ರಸಸಾರ ಹೆಚ್ಚಾಗಿ ಮೇವು ಹುಳಿಯಾಗಿ ಕೊಳೆತ ವಾಸನೆಯಿಂದ ಕೂಡಿರುತ್ತದೆ.<br>**ಬೇಸಿಗೆ ತಿಂಗಳಿನಲ್ಲಿ ಪಶು ಸಂಗೋಪನಾ ಸಲಹೆಗಳು :**<br>1. ಬಿಸಿಲು ಹೆಚ್ಚಾಗಿರುವುದರಿಂದ ಹಸಿರು ಹುಲ್ಲಿನ ಅಭಾವ ಕಂಡುಬರುತ್ತದೆ ಆದುದರಿಂದ ಹಗೇವಿನಲ್ಲಿ ರಸಮೇವನ್ನು ತಯಾರಿಸಿ ಮತ್ತು ಒಣ ಹುಲ್ಲು ಮತ್ತು ಬೆಳೆಯ ಉಳಿಕೆಗಳನ್ನು ದನಕರುಗಳಿಗೆ ಕೊಡಿ.<br>2. ದನಕರುಗಳ ಕೊಟ್ಟಿಗೆಯ ಮೇಲೆ 4–6 ಇಂಚು ಹುಲ್ಲಿನ ಹೊದಿಕೆಯನ್ನು ಹಾಕಿ, ಮದ್ಯಾಹ್ನದಲ್ಲಿ 2–3 ಸಲ ನೀರು ಹೊಡೆಯಬೇಕು ಹಾಗೂ ಕೊಟ್ಟಿಗೆಯ ನೆಲ ಮತ್ತು ಗೋಡೆಗಳಿಗೂ ಸಹ ನೀರು ಹೊಡೆಯಬೇಕು. ಇದರಿಂದ ಕೊಟ್ಟಿಗೆಯು ತಕ್ಕಮಟ್ಟಿಗೆ ತಂಪಾಗಿ ಉಳಿಯುತ್ತದೆ.<br>3. ಕೊಟ್ಟಿಗೆಯಲ್ಲಿ ಗಾಳಿ ಸರಾಗವಾಗಿ ಅಡುವಂತೆ ವ್ಯವಸ್ಥೆ ಮಾಡಬೇಕು.<br>4. ಸ್ವಚ್ಛವಾದ ನೀರನ್ನು ಮೇಲಿಂದ ಮೇಲೆ ಕುಡಿಸಬೇಕು.<br>5. ರಾಸುಗಳನ್ನು ಬಿಸಿಲಿಗೆ ಬಿಡಬಾರದು, ಬೆಳಿಗ್ಗೆ ಅಥವಾ ಸಂಜೆ ವೇಳೆಯಲ್ಲಿ ರಾಸುಗಳನ್ನು ಮೇಯಲು ಬಿಡಬೇಕು. |


**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**


**ಮೊಬೈಲ್ ಆಪ್:**

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮುನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.